# ನಾಳೆಯಿಂದ ಆಹಾರ ಮೇಳ

**ಹುಬ್ಬಳ್ಳಿ:** ನವೋದ್ಯಮಿ ಸಂಸ್ಥೆ ಸಣ್ಣ ಉದ್ಯಮಿದಾರರ ಅಭಿವೃದ್ಧಿಗೆ ಸಂಕ್ರಾಂತಿ ಹಬ್ಬದ ಪ್ರಯುಕ್ತ ಆಹಾರ ಮೇಳವನ್ನು ಜ.11ರಿಂದ13ರ ವರೆಗೆ ವಿಜಯನಗರದ ಕೆಂಪಣ್ಣವರ ಕಲ್ಯಾಣಮಂಟಪದಲ್ಲಿ ಆಯೋಜಿಸಲಾಗಿದೆ. ನವೋದ್ಯಮಿ ಸಂಸ್ಥೆಯು ರುಚಿಕರ ಮತ್ತು ವಿಭಿನ್ನ ಶೈಲಿಯ ಆಹಾರ ತಯಾರಿಸುವವರಿಗೆ ಉತ್ತಮ ಅವಕಾಶ ಒದಗಿಸುವ ಉದ್ದೇಶ ಹೊಂದಿದ್ದು, ಈ ಮೇಳದಲ್ಲಿ ಭಾಗವಹಿಸಿದ ಅತ್ಯುತ್ತಮ ಮಳಿಗೆಗಳಿಗೆ ಬಹುಮಾನ ನೀಡಲಾಗುವುದು. ಮೇಳದಲ್ಲಿ ತಾವು ತಯಾರಿಸಿದ ಆಹಾರ ಪದಾರ್ಥ, ತಿಂಡಿ ತಿನಿಸು, ಸಿರಿಧಾನ್ಯ, ಸಾವಯವ ತರಕಾರಿ-ಹಣ್ಣುಗಳು ಮತ್ತು ವಿವಿಧ ರಾಜ್ಯಗಳ ವಿಶೇಷ ಆಹಾರಗಳ ಪ್ರದರ್ಶನ ಮತ್ತು ಮಾರಾಟ ಮಾಡಲು ಬಯಸುವವರು ತಮ್ಮ ಹೆಸರು ನೋಂದಾಯಿಸಬಹುದಾಗಿದೆ. ಈ ನವೋದ್ಯಮಿ ಮೇಳದಲ್ಲಿಮಳಿಗೆಹಾಕಲು ಬಯಸುವವರು ವಿಳಾಸ, ನವೋದ್ಯಮಿ, ದೇಶಪಾಂಡೆ ಫೌಂಡೇಶನ, ಬಿವಿಬಿ ಕಾಲೇಜ್ ಕ್ಯಾಂಪಸ್, ಹುಬ್ಬಳ್ಳಿ.ದೂ. 8880964624 -9900053761 ಸಂಪರ್ಕಿಸಬಹುದು.